ಅಸಲು ದಾವಾ ನಂ. 84/2024
ಪಿ ಡಬ್ಲ್ಯೂ-1

ದಿನಾಂಕಃ 06-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲುಃ- ಪ್ರತಿವಾದಿ ನಂ.**2** ರಿಂದ **5** ರವರ ಪರ ಶ್ರೀ. ವಿ ಬಿ ಟಿ ವಕೀಲರಿಂದ.</u>

ಮೂಲ ಪುರಷ ಬಸವಣ್ಣೆಪ್ಪ ಈತನ ಹೆಂಡತಿಯ ಹೆಸರು ಯಲ್ಲವ್ವ ಮತ್ತು ಬಸವ್ವ ಅಂತಾ ಇರುತ್ತದೆ. ಬಸವಣ್ಣೆಪ್ಪನ ತಂದೆಯ ಹೆಸರು ಶೆಟ್ಟೆಪ್ಪ ಮತ್ತು ತಾಯಿಯ ಹೆಸರು ಮಲ್ಲವ್ವ ಇರುತ್ತದೆ. ನನ್ನ ತಾಯಿ ಬಸವ್ವಳ ವಿವಾಹ ಬಸವಣ್ಣೆಪ್ಪನ ಜೊತೆಗೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಾಯಿ ಬಸವ್ವ ಇವಳು ಬಸವಣ್ಣೆಪ್ಪನ ಹೆಂಡತಿ ಎಂದು ತೋರಿಸಲು ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಇಲ್ಲ. ಬಸವಣ್ಣೆಪ್ಪ ಯಲ್ಲವ್ವ ಇವಳನ್ನು ಯಾವಾಗ ಲಗ್ನ ಆಗಿದ್ದರು ಎಂದು ಗೊತ್ತಿಲ್ಲ. ಯಲ್ಲವ್ವ ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಾಯಿ ಬಸವ್ವ 1983 ರಲ್ಲಿ ತೀರಿಕೊಂಡಿರುತ್ತಾರೆ ಆದರೆ ದಿನಾಂಕ, ತಿಂಗಳು ಹೇಳಲು ಬರುವುದಿಲ್ಲ. ಅವರು ಹಾನಗಲ್ ತಾಲೂಕಿನ ವರ್ದಿ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ. ಬಸವಣ್ಣೆಪ್ಪ ತೀರಿಕೊಂಡ ನಂತರ ನನ್ನ ತಾಯಿಗೆ ಅವರಿಂದ ವಾರಸಾ ನಾತೆಯಿಂದ ಯಾವುದೇ ಆಸ್ತಿಗಳು ಬಂದಿಲ್ಲ. ವಾದಿ ನಂ.3, 5, 4 ಇವರ ಹೆಸರುಗಳು ಬಸವಣ್ಣೆಪ್ಪ ಈತ ತೀರಿಕೊಂಡ ನಂತರ ವಾರಸಾ ನಾತೆಯಿಂದ ಅವರ ಆಸ್ತಿಗಳಿಗೆ ಹೆಸರು ಹತ್ತಿಲ್ಲ. ಬಸವಣ್ಣೆಪ್ಪ ಇವರ ಆಸ್ತಿಗಳಿಗೆ ಪ್ರತಿವಾದಿ ನಂ.1, 3 ಮತ್ತು 4 ಇವರ ಹೆಸರುಗಳು ವಾರಸಾ ನಾತೆಯಿಂದ ಹತ್ತಿರುತ್ತವೆ. ಹಾಗೇ ಯಾವ ವರ್ಷ ಹೆಸರುಗಳು ನೋಂದಾವಣಿ ಆಗಿರುತ್ತವೆ ಎಂದು ಗೊತ್ತಿಲ್ಲ. ವರ್ದಿ ಗ್ರಾಮದ ಸರ್ವೆ ನಂ.48/4 ಇದು ಬಸವ್ವ ಇವರಿಗೆ ಅವರ ತಾಯಿಯಿಂದ ಬಂದ ಆಸ್ತಿ ಇರುತ್ತದೆ. ಪ್ರತಿವಾದಿ ನಂ.1, 3 ಮತ್ತು 4 ಇವರ ಹೆಸರುಗಳು ವಾರಸಾ ನಾತೆಯಿಂದ ಹತ್ತಿದ ನಂತರ ಅದನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ಪ್ರತಿವಾದಿ ನಂ.1, 3, 4 ಕಳೆದ 40 ವರ್ಷಗಳಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಸಾಕ್ಷಿ 1 ನೇ ಪ್ರತಿವಾದಿಯ ಮೊದಲನೇಯ ಹೆಂಡತಿ ಪಾರವ್ವ, ಎರಡನೇ ಹೆಂಡತಿ ಚನ್ನಬಸವ್ವ ಎಂದು ಮುಂದುವರೆದು ನುಡಿಯುತ್ತಾರೆ. ಚನ್ನಬಸವ್ವ 1 ನೇ ಪ್ರತಿವಾದಿಯರನ್ನು ಯಾವ ದಿನಾಂಕದಂದು ಎಲ್ಲಿ ವಿವಾಹವಾಗಿರುತ್ತಾರೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿ

ಈಗಲೂ ಸಹ ಜೀವಿತ ಇರುತ್ತಾರೆ ಎಂದರೆ ಸರಿ. ನಾನು ಯಾವಾಗ ಜನಿಸಿರುತ್ತೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಕಾಗದ ಪತ್ರ ಹಾಜರುಪಡಿಸಿರುವುದಾಗಿ ಸ್ವತಃ ನುಡಿಯುತ್ತಾರೆ.

2. ಮೃತ ನೀಲವ್ವ ನನ್ನ ಸ್ವಂತ ತಂಗಿ ಇದ್ದರು. ಅವರು ಹುಟ್ಟಿದ ದಿನಾಂಕ ಹೇಳಲು ಬರುವುದಿಲ್ಲ. ವಾದಿ ನಂ.2 ಇವರ ಹುಟ್ಟಿದ ದಿನಾಂಕ ಹೇಳಲು ಬರುವುದಿಲ್ಲ. ನಾನು, ವಾದಿ ನಂ.2 ಮತ್ತು ಮೃತ ನೀಲವ್ವ ಅವಳಿ-ಜವಳಿ ಮಕ್ಕಳು ಇರುವುದಿಲ್ಲ. ನಾನು ಫಕ್ಕೀರನಂದಿಹಳ್ಳಿ ಗ್ರಾಮದಲ್ಲಿ ಮತ್ತು ನೀಲವ್ವ ವರ್ದಿ ಗ್ರಾಮದಲ್ಲಿ ಜನಿಸಿರುತ್ತೇವೆ. ವಾದಿ ನಂ.2 ದಿನಾಂಕ 10-06-1976 ರಂದು ಜನಿಸಿರುವುದಾಗಿ ಕಾಗದ ಪತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನೀಲವ್ವ ದಿನಾಂಕ 01-06-1976 ರಂದು ಜನಿಸಿರುವುದಾಗಿ ಕಾಗದ ಪತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ಯಾವ ದಿನಾಂಕದಂದು ಜನಿಸಿರುತ್ತೇನೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಬಸವಣ್ಣೆಪ್ಪ ಇವರಿಗೆ ಕಳ್ಳಿಮನಿ ಎಂಬುವ ಮನೆತನದ ಹೆಸರಿನಿಂದ ರೂಢಿಗತವಾಗಿ ಕರೆಯುತ್ತಿದ್ದರು ಎಂದರೆ ಸರಿ. ನಾನು ಹಾಜರುಪಡಿಸಿದ ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ಬಸವಣ್ಣೆಪ್ಪ ಇವರ ಮನೆತನದ ಹೆಸರು ಕಳ್ಳಿಮನಿ ಮಾತ್ರ ಇರುತ್ತದೆ ಎಂದರೆ ಸರಿ. ಬಸವಣ್ಣೆಪ್ಪ ಯಾವ ದಿನಾಂಕದಂದು ಜನಿಸಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ-8 ರಲ್ಲಿ ಬಸವಣ್ಣೆಪ್ಪ ಶೆಟ್ಟೆಪ್ಪ ಕಳ್ಳಿಮನಿ ಎಂಬುವುದಾಗಿ ನಮೂದಿಸಲಾಗಿರುತ್ತದೆ ಎಂದರೆ ಸರಿ.

3. ದಾವಾದ ಆಸ್ತಿಗಳು ಮೂಲ ಪುರುಷ ಬಸವಣ್ಣೆಪ್ಪ ಇವರಿಗೆ ಯಾವ ರೀತಿಯಿಂದ ಬಂದಿರುತ್ತವೆ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ. ದಾವಾದ ಆಸ್ತಿಗಳು ಪ್ರತಿವಾದಿ ನಂ.3 ಮತ್ತು 4 ಇವರಿಗೆ ಮೂಲ ಪುರಷ ಬಸವಣ್ಣೆಪ್ಪ ಇವರಿಂದ ಬಂದಿರುತ್ತವೆ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ. ಸಾಕ್ಷಿ ಕಾಗದ ಪತ್ರಗಳು ಸುಟ್ಟು ಹೋಗಿರುವುದಾಗಿ ನುಡಿಯುತ್ತಾರೆ. ಗ್ರಾಮ ಪಂಚಾಯತಿ ಆಸ್ತಿ ನಂ.163/ಎ ಇದು ಪ್ರತಿವಾದಿ ನಂ.6 ಇವರಿಗೆ ಅವರ ಗಂಡ ಶೆಟ್ಟೆಪ್ಪನಿಂದ ಬಂದಿರುತ್ತದೆ.

ಅಸಲು ದಾವಾ ನಂ. 84/2024
ಪಿ ಡಬ್ಲ್ಯು-1

ಸದರಿ ಆಸ್ತಿಯನ್ನು ಶೆಟ್ಟೆಪ್ಪ ಖರೀದಿ ಹಿಡಿದಿದ್ದರು. ಗ್ರಾಮ ಪಂಚಾಯತಿ ಆಸ್ತಿ ನಂ.163 ನೇದ್ದನ್ನು 1 ನೇ ಪ್ರತಿವಾದಿ ಖರೀದಿ ಹಿಡಿದಿರುತ್ತಾರೆ. ಸರ್ವೆ ನಂ.41/5 ರ ಜಮೀನು ನಮ್ಮ ಪೂರ್ವಜರಿಂದ ಬಂದ ಜಮೀನು ಇರುತ್ತದೆ. ಹಾಗೇ ಹಿರಿಯರಿಂದ ಬಂದ ಆಸ್ತಿ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಕಳ್ಳಿಮನಿ ಎಂಬ ಮನೆತನದ ಹೆಸರು ನಮೂದಿಸಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ನೀಲವ್ವ ಚನ್ನಪ್ಪ ಎಂದು ಹೆಸರು ನಮೂದು ಇರುತ್ತದೆ ಎಂದರೆ ಸರಿ. ನೀಲವ್ವಳಾಗಲೀ, ಮಲ್ಲೇಶಪ್ಪ ಆಗಲೀ 10 ದಿನದ ಅಂತರದೊಳಗೆ ಜನಿಸಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿ ನಂ.2 ರಿಂದ 5 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).